ಕಾಲ ವ್ಯಾಪಾರ ಮಾಡಿದಂತಹ ಜಾಗದಲ್ಲಿ ಸಹ ಶಾಲೆ open ಮಾಡುತ್ತೇವೆ ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಾರೆ. ಜೊತೆಗೆ ಇದು ದುಬಾರಿ ವ್ಯಾಪರವಾಗಿದೆ. ಒಂದು ಲೈಸೆನ್ಸ್‌ಗೆ ಒಂದು ಕೋಟಿ ಹಾಗೂ ಒಂದು ಕೋಟಿ 20 ಲಕ್ಷ ರೂಪಾಯಿಗಳ ಮೇಲೆ . . .

ಅಧ್ಯಕ್ಷರು:– ಚರ್ಚೆ ಬೇಡ. ಏನು ಮಾಡಬೇಕು ಎಂದು ಹೇಳಿ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):– ಅಲ್ಲದೆ even ವ್ಯಾಪಾರ shift ಮಾಡುವುದಕ್ಕೂ ಸಹ ಇವರು double the license ದುಡ್ಡು ತೆಗೆದುಕೊಳ್ಳುತ್ತಾರೆ. ಅದಕ್ಕಾಗಿ ಇದನ್ನು ರದ್ದು ಮಾಡಬೇಕು. ರೂಲ್–5ಕ್ಕೆ amendment ತಂದು, ಯಾರು 20–25 ವರ್ಷಗಳಿಂದ ಲೈಸೆನ್ಸ್ ತೆಗೆದುಕೊಂಡು ನಡೆಸುತ್ತಿದ್ದಾರೋ, ಅಲ್ಲಿ ಯಾರಾದರೂ ಈ ರೀತಿ open ಮಾಡಿದರೆ, ಅದು ರೂಲ್–5 ಅಡಿಯಲ್ಲಿ attract ಆಗದಂತೆ amendment ತರಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಅಬಕಾರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಾದ ಕೃಷ್ಣಪ್ಪರವರು ಹೇಳಿದ ವಿಷಯವನ್ನು ಪರಿಶೀಲಿಸಿ ಅದಕ್ಕೆ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳುತ್ತೇವೆ.

8) ವಿಷಯ: 1ನೇ ತರಗತಿಯಿಂದ 12ನೇ ತರಗತಿಯವರೆಗೆ ಶಾಲಾ ಕಾಲೇಜುಗಳಲ್ಲಿ ಯೋಗಾಭ್ಯಾಸವನ್ನು ಕಡ್ಡಾಯಗೊಳಿಸುವ ಬಗ್ಗೆ.

ಶ್ರೀ ಜೆ.ಟಿ. ಪಾಟೀಲ್ (ಬೀಳಗಿ):– ಮಾನ್ಯ ಅಧ್ಯಕ್ಷರೆ, 1ನೇ ತರಗತಿಯಿಂದ 12ನೇ ತರಗತಿಯವರೆಗೆ ಶಾಲಾ ಕಾಲೇಜುಗಳಲ್ಲಿ ಯೋಗಾಭ್ಯಾಸವನ್ನು ಕಡ್ಡಾಯಗೊಳಿಸುವ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಯೋಗ ಶಿಕ್ಷಣವು ದೈಹಿಕ ಶಿಕ್ಷಣದ ಭಾಗವಾಗಿದ್ದು, ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿಯವರೆಗೆ ದೈಹಿಕ ಶಿಕ್ಷಣವನ್ನು ಅನೌಪಚಾರಿಕ ಚಟುವಟಿಕೆಯಾಗಿ ಕಲಿಸಲಾಗುತ್ತಿದೆ. ಪ್ರೋ॥ ಎಲ್.ಆರ್. ವೈದ್ಯನಾಥನ್ ವರದಿಯನ್ವಯ 6 ರಿಂದ 10ನೇ ತರಗತಿವರೆಗೆ ದೈಹಿಕ ಶಿಕ್ಷಣದ ಬಗ್ಗೆ ಇತರ ವಿಷಯಗಳಂತೆ ಪಠ್ಯಪುಸ್ತಕಗಳನ್ನು ಒದಗಿಸಿ ದೈಹಿಕ ಶಿಕ್ಷಣದೊಂದಿಗೆ ಯೋಗಾಭ್ಯಾಸವನ್ನು ಸಹ ಬೋಧಿಸಲಾಗುತ್ತದೆ. ಶೈಕ್ಷಣಿಕವಾಗಿ ಹಿಂದುಳಿದಿರುವ ಮತ್ತು ವಿದ್ಯಾರ್ಥಿಗಳ ಸಂಖ್ಯೆ 500 ಕ್ಕಿಂತ ಹೆಚ್ಚು ಇರುವ 16 ಜಿಲ್ಲೆಗಳ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗ ಶಿಕ್ಷಣವನ್ನು ಬೋಧಿಸಲು ಹೆಚ್ಚುವರಿಯಾಗಿ 39 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಸೃಜಿಸಲಾಗಿದೆ.

ಪಠ್ಯಪುಸ್ತಕಗಳಲ್ಲಿ ಯೋಗ ಶಿಕ್ಷಣದ ಬಗ್ಗೆ ವಿಷಯವನ್ನು ಅಳವಡಿಸಿ ತಾತ್ವಿಕ ಮತ್ತು ಪ್ರಾಯೋಗಿಕವಾಗಿ ಕಲಿಸಲಾಗುತ್ತಿದೆ. ಅಲ್ಲದೇ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಯೋಗಾಸನಗಳ ಬಗ್ಗೆ ವಿವಿಧ ಹಂತಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿ, ರಾಜ್ಯಮಟ್ಟದಲ್ಲಿ ಆಯ್ಕೆಯಾದ ಮಕ್ಕಳನ್ನು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಕಳುಹಿಸಲಾಗುತ್ತಿದೆ. ಹಾಗೂ ಆರೋಗ್ಯದ ದೃಷ್ಟಿಯಿಂದ ಯೋಗಭ್ಯಾಸವು ಅವಶ್ಯಕವಾಗಿದ್ದು, 1ನೇ ತರಗತಿಯಿಂದ 12ನೇ ತರಗತಿಯವರೆಗೆ ಶಾಲಾ–ಕಾಲೇಜುಗಳಲ್ಲಿ ಯೋಗಾಭ್ಯಾಸ ಕಡ್ಡಾಯಗೊಳಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜೆ.ಟಿ. ಪಾಟೀಲ್ (ಬೀಳಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯದ ಜನತೆಯ ಮುಂದಿನ ಜನಾಂಗದ ಆರೋಗ್ಯದ ದೃಷ್ಟಿಯಿಂದ 1ನೇ ತರಗತಿಯಿಂದ 12ನೇ ತರಗತಿಯವರೆಗೆ ಹಾಗೂ ಕಾಲೇಜುಗಳಲ್ಲಿ ಸಹಿತ ಯೋಗಾಭ್ಯಾಸವನ್ನು ಕಡ್ಡಾಯಗೊಳಿಸುವ ಸಲುವಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಯೋಗ ಶಿಕ್ಷಣವು ದೈಹಿಕ ಶಿಕ್ಷಣದ ಭಾಗವಾಗಿದ್ದು, ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿಯವರೆಗೆ ದೈಹಿಕ ಶಿಕ್ಷಣವನ್ನು ಅನೌಪಚಾರಿಕ ಚಟುವಟಿಕೆಯಾಗಿ ಕಲಿಸಲಾಗುತ್ತಿದೆ. ಪ್ರೊ॥ ಎಲ್.ಆರ್. ವೈದ್ಯನಾಥನ್ ವರದಿಯನ್ವಯ 6 ರಿಂದ 10ನೇ ತರಗತಿಯವರೆಗೆ ದೈಹಿಕ ಶಿಕ್ಷಣದ ಬಗ್ಗೆ ಇತರ ವಿಷಯಗಳಂತೆ ಪಠ್ಯಪುಸ್ತಕಗಳನ್ನು ಒದಗಿಸಿ ದೈಹಿಕ ಶಿಕ್ಷಣದೊಂದಿಗೆ ಯೋಗಾಭ್ಯಾಸವನ್ನು ಸಹ ಬೋಧಿಸಲಾಗುತ್ತದೆ. ಶೈಕ್ಷಣಿಕವಾಗಿ ಹಿಂದುಳಿದಿರುವ ಮತ್ತು ವಿದ್ಯಾರ್ಥಿಗಳ ಸಂಖ್ಯೆ 500 ಕ್ಕಿಂತ ಹೆಚ್ಚು ಇರುವ 16 ಜಿಲ್ಲೆಗಳ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗ ಶಿಕ್ಷಣವನ್ನು ಬೋಧಿಸಲು ಹೆಚ್ಚುವರಿಯಾಗಿ 39 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಸೃಜಿಸಲಾಗಿದೆ.

ಪಠ್ಯಪುಸ್ತಕಗಳಲ್ಲಿ ಯೋಗ ಶಿಕ್ಷಣದ ಬಗ್ಗೆ ವಿಷಯವನ್ನು ಅಳವಡಿಸಿ ತಾತ್ವಿಕ ಮತ್ತು ಪ್ರಾಯೋಗಿಕವಾಗಿ ಕಲಿಸಲಾಗುತ್ತಿದೆ. ಅಲ್ಲದೇ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಯೋಗಾಸನಗಳ ಬಗ್ಗೆ ವಿವಿಧ ಹಂತಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿ, ರಾಜ್ಯಮಟ್ಟದಲ್ಲಿ ಆಯ್ಕೆಯಾದ ಮಕ್ಕಳನ್ನು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಕಳುಹಿಸಲಾಗುತ್ತಿದೆ ಹಾಗೂ ಆರೋಗ್ಯದ ದೃಷ್ಟಿಯಿಂದ ಯೋಗಾಭ್ಯಾಸವು ಅವಶ್ಯಕವಾಗಿದ್ದು, 1ನೇ ತರಗತಿಯಿಂದ 12ನೇ ತರಗತಿಯವರೆಗೆ ಶಾಲಾ ಕಾಲೇಜುಗಳಲ್ಲಿ ಯೋಗಾಭ್ಯಾಸ ಕಡ್ಡಾಯಗೊಳಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

9) ವಿಷಯ: ಮರಿಯಮ್ಮನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ವಿಫಲವಾಗಿರುವ ಬಗ್ಗೆ.

ಶ್ರೀ ಎಸ್. ಭೀಮಾನಾಯ್ಕ (ಹಗರಿಬೊಮ್ಮನಹಳ್ಳಿ):– ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಹಗರಿಬೊಮ್ಮನಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮರಿಯಮ್ಮನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ವಿಫಲವಾಗಿರುವ ಬಗ್ಗೆ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):– ಮಾನ್ಯ ಅಧ್ಯಕ್ಷರೆ,

ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು ಹಗರಿ ಬೊಮ್ಮನಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮರಿಯಮ್ಮನಹಳ್ಳಿ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರು ಮಟ್ಕಾ, ಇಸ್ಪೀಟ್ ಜೂಜಾಟ, ಅಬಕಾರಿ ಇನ್ನಿತರೆ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿ ಮತ್ತು ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

1) 2013 ನೇ ಸಾಲಿನಲ್ಲಿ 7 ಮಟಕಾ ಪ್ರಕರಣಗಳು ಹಾಗೂ 5 ಇಸ್ಪೀಟ್ ಜೂಜಾಟದ ಪ್ರಕರಣಗಳು ಸೇರಿದಂತೆ ಒಟ್ಟು 12 ಪ್ರಕರಣಗಳನ್ನು ದಾಖಲಿಸಿ ಒಟ್ಟು 42 ಆರೋಪಿತರನ್ನು ದಸ್ತಗಿರಿ ಮಾಡಿ ಅವರಿಂದ ಒಟ್ಟು 52,140 ರೂ.ಗಳನ್ನು ಜಪ್ತು ಮಾಡಲಾಗಿರುತ್ತದೆ. ಹಾಗೂ 2014 ನೇ ಸಾಲಿನಲ್ಲಿ 10 ಮಟಕಾ ಪ್ರಕರಣಗಳನ್ನು ಹಾಗೂ 1 ಇಸ್ಪೀಟ್ ಜೂಜಾಟದ ಪ್ರಕರಣಗಳನ್ನು ದಾಖಲಿಸಿ ಒಟ್ಟು 14 ಆರೋಪಿತರನ್ನು ದಸ್ತಗಿರಿ ಮಾಡಿ ಅವರಿಂದ ಒಟ್ಟು 22,305/– ರೂ.ಗಳನ್ನು ಜಪ್ತು ಮಾಡಲಾಗಿರುತ್ತದೆ. ಮತ್ತು ಸದರಿ ಪ್ರಕರಣಗಳಲ್ಲಿ ಭಾಗಿಯಾದ 7 ಜನ ಆರೋಪಿತರ ವಿರುದ್ಧ ರೌಡಿ ಹಾಳೆಯನ್ನು ತೆರೆದು ಅವರ ಮೇಲೆ ಕರ್ನಾಟಕ ಪೊಲೀಸ್ ಕಾಯ್ದೆ 55, 56 ರ ಅಡಿಯಲ್ಲಿ ಗಡಿಪಾರಿಗಾಗಿ ಕ್ರಮ ಜರುಗಿಸಲು ಸಹಾಯಕ ಆಯುಕ್ತರು ಹೊಸಪೇಟೆ ರವರಲ್ಲಿ ವರದಿಯನ್ನು ಸಲ್ಲಿಸಿ ಯಶಸ್ವಿಯಾಗಿ ಸದರಿ 7 ಜನರಿಗೆ 2 ವರ್ಷದ ವರೆಗೆ ಗಡಿಪಾರು ಆದೇಶದ ಮೇರೆಗೆ ಸದರಿಯವರನ್ನು ಗದಗ, ಚಿತ್ರದುರ್ಗ, ಕೊಪ್ಪಳ ಮತ್ತು ದಾವಣಗೆರೆ ಸ್ಥಳಗಳಲ್ಲಿ ಗಡಿಪಾರು ಎಂದು ಬಿಟ್ಟು ಬರಲಾಗಿದೆ.

ವರ್ಷ	ಜೂಜಾಟ	ಪ್ರಕರಣಗಳ ಸಂಖ್ಯೆ	ದಸ್ತಗಿರಿ ಮಾಡಿದ ಆರೋಪಿತರ ಸಂಖ್ಯೆ	ಜಪ್ತು ಪಡಿಸಿದ ಹಣ
2013	ಮಟಕಾ	7	7	11,840/–
	ಇಸ್ಪೀಟ್	5	35	40,300/–
ಒಟ್ಟು		12	42	52,140/–

ವರ್ಷ	ಜೂಜಾಟ	ಪ್ರಕರಣಗಳ ಸಂಖ್ಯೆ	ದಸ್ತಗಿರಿ ಮಾಡಿದ ಆರೋಪಿತರ ಸಂಖ್ಯೆ	ಜಪ್ತು ಪಡಿಸಿದ ಹಣ
2013	ಮಟಕಾ	10	10	19,305/–
	ಇಸ್ಪೀಟ್	01	04	3,000/–
ಒಟ್ಟು		11	14	22,305/–

2) ಮರಿಯಮ್ಮಹಳ್ಳಿ ಪೊಲೀಸ್ ಠಾಣಾ ಸರಹದ್ದಿನಲ್ಲಿ ಇನ್ನಿತರೆ ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಗಟ್ಟುವಲ್ಲಿ ನಿಯಂತ್ರಿಸಿದ್ದು 2013 ನೇ ಸಾಲಿನಲ್ಲಿ ಅಕ್ರಮವಾಗಿ ಗಂಧದ ಕಟ್ಟಿಗಳನ್ನು ಸಾಗಾಣಿಕೆ ಸಂಬಂಧ ಇಬ್ಬರು ಆರೋಪಿತರಿಂದ 30000/– ರೂ. ಬೆಲೆ ಬಾಳುವ ಶ್ರೀಗಂಧದ ಕಟ್ಟಿಗೆಗಳನ್ನು ಹಾಗು ಮೋಟರ್ ಸೈಕಲ್‌ನ್ನು ಅಂದಾಜು ಬೆಲೆ 18000/– ರೂ. ಒಟ್ಟು 48000/– ಬೆಲೆ ಬಾಳುವುದನ್ನು ವಶಪಡಿಸಿಕೊಂಡು ಪ್ರಕರಣ ದಾಖಿಲಾಯಿಸಿಕೊಂಡಿದ್ದು ಇರುತ್ತದೆ. ಅದೇ ರೀತಿ 2014 ನೇ ಸಾಲಿನಲ್ಲಿ ರಕ್ತ ಚಂದನ ಕಟ್ಟಿಗೆಗಳು ಮತ್ತು ಒಂದು ಲಾರಿ ಹಾಗು 100 ತೆಂಗಿನ ಕಾಯಿ ಚೀಲಗಳನ್ನು ಆರೋಪಿತನಿಂದ 52,18,000/– ಲಕ್ಷ ರೂ. ವಶಪಡಿಸಿಕೊಂಡು ಪ್ರಕರಣ ದಾಖಿಲಾಯಿಸಿಕೊಂಡಿದ್ದು ಇರುತ್ತದೆ.

ಕ್ರ.ಸಂ.	ಗುನ್ನೆ ಸಂಖ್ಯೆ	ಕಲಂ	ಆರೋಪಿತರ ಸಂಖ್ಯೆ	ವಶಪಡಿಸಿಕೊಂಡ ಸ್ವತ್ತು ಹಣ
01	68/13	379 ಐ.ಪಿ.ಸಿ. ಮತ್ತು ಕಲಂ: 84,86,87 ಕೆ.ಎಫ್ ಯಾಕ್ಟ್	2	30,000–00 ರೂ ಬೆಲೆ ಬಾಳುವ ಶ್ರೀಗಂಧದ ಕಟ್ಟಿಗೆಗಳು ಹಾಗು ಬೈಕ್ ಬೆಲೆ 18,000–00
02	124/14	379 ಐ.ಪಿ.ಸಿ. ರ/ವಿ 33, 50, 62, 71, (ಎ), 84, 86, 87 ಕೆ.ಎಫ್. ಯ್ಯಾಕ್ಟ್ 1963 ಮತ್ತು 144 ಕೆ.ಎಫ್. ರೂಲ್ಸ್	2	52,18,000–00 ರೂ ಬೆಲೆ ಬಾಳುವ ರಕ್ತ ಚಂದನ ಕಟ್ಟಿಗೆಗಳು ಮತ್ತು ಒಂದು ಲಾರಿ ಹಾಗು 100 ತೆಂಗಿನ ಕಾಯಿ ಚೀಲಗಳು